# ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಉಪಕರ ಅಧಿನಿಯಮ, 1985

(1986ರ ಅಧಿನಿಯಮ ಸಂಖ್ಯೆ 3)

ಕೆಲವು ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಮತ್ತು ಸಂವರ್ಧನೆಗಾಗಿ ಅವುಗಳ ರಫ್ತಿನ ಮೇಲೆ ಉಪಕರದ ರೂಪದಲ್ಲಿ ಸೀಮಾಸುಂಕವನ್ನು ವಿಧಿಸುವ ಮತ್ತು ಸಂಗ್ರಹಿಸುವ ಮತ್ತು ಅವುಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಉಪಕರ ಅಧಿನಿಯಮ, 1985 ಎಂದು ಕರೆಯತಕ್ಕದು.

(2)ಇದು ಇಡೀ ಭಾರತ ದೇಶಕ್ಕೆ ವ್ಯಾಪ್ತವಾಗುತ್ತದೆ.

(3)ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪ್ರಾಧಿಕಾರ" ಎಂದರೆ, ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ 4ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ;

(ಬಿ) "ಅನುಸೂಚಿತ ಉತ್ಪನ್ನ" ಎಂದರೆ ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ ಅನುಸೂಚಿಯಲ್ಲಿ ತಾತ್ಕಾಲಿಕವಾಗಿ ಸೇರಿಸಲಾದ ಯಾವುದೇ ಉತ್ಪನ್ನ.

(2)ಈ ಅಧಿನಿಯಮದಲ್ಲಿ ಉಪಯೋಗಿಸಿದ ಮತ್ತು ಪರಿಭಾಷಿಸಿರದ ಆದರೆ ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರಲ್ಲಿ ಪರಿಭಾಷಿಸಿರುವ ಎಲ್ಲ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಲಾದ ಅರ್ಥಗಳನ್ನೇ ಹೊಂದಿರತಕ್ಕದು.

3. ಅನುಸೂಚಿತ ಉತ್ಪನ್ನಗಳ ಮೇಲೆ ಸೀಮಾಸುಂಕ:- (1) ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ರಫ್ತು ಮಾಡಲಾಗುವ ಎಲ್ಲ ಅನುಸೂಚಿತ ಉತ್ಪನ್ನಗಳ ಮೇಲೆ ಶೇಕಡ ಮೂರಕ್ಕೆ ಮೀರದಂತಹ ದರದಲ್ಲಿ ಮೌಲ್ಯಾನುಸಾರ ಸೀಮಾಸುಂಕವನ್ನು ಉಪಕರದ ರೂಪದಲ್ಲಿ ವಿಧಿಸತಕ್ಕದು ಮತ್ತು ಸಂಗ್ರಹಿಸತಕ್ಕದು.

(2) (1)ನೇ ಉಪಪ್ರಕರಣದ ಮೇರೆಗೆ ಅನುಸೂಚಿತ ಉತ್ಪನ್ನಗಳ ಮೇಲೆ ವಿಧಿಸಲಾಗುವ ಸೀಮಾಸುಂಕವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ, ಅಂಥ ಅನುಸೂಚಿತ ಉತ್ಪನ್ನಗಳ ಮೇಲೆ ವಿಧಿಸಬಹುದಾದ ಯಾವುದೇ ಉಪಕರ ಅಥವಾ ಸುಂಕದ ಜೊತೆಗೆ ಹೆಚ್ಚಿಗೆಯಾಗಿ ಇರತಕ್ಕದು.

(3) ಮರು ಪಾವತಿಗಳು ಮತ್ತು ಸುಂಕ ವಿನಾಯಿತಿಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನೊಳಗೊಂಡು ಸೀಮಾಸುಂಕ ಅಧಿನಿಯಮ, 1962 (1962ರ 52)ರ ಉಪಬಂಧಗಳು ಮತ್ತು ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳು ಸಾಧ್ಯವಾದಷ್ಟುಮಟ್ಟಿಗೆ (1)ನೇ ಉಪಪ್ರಕರಣದ ಮೇರೆಗೆ ವಿಧಿಸಬಹುದಾದ, ಸೀಮಾಸುಂಕ ವಿಧಿಸುವಿಕೆ ಮತ್ತು ಸಂಗ್ರಹಕ್ಕೆ ಸಂಬಂಧಪಟ್ಟಂತೆ, ಆ ಅಧಿನಿಯಮ ಅಥವಾ ಆ ನಿಯಮಗಳು ಮತ್ತು ವಿನಿಯಮಗಳ ಮೇರೆಗೆ ಸೀಮಾಸುಂಕಗಳ ವಿಧಿಸುವಿಕೆ ಹಾಗೂ ಸಂಗ್ರಹಕ್ಕೆ ಸಂಬಂಧಪಟ್ಟಂತೆ ಅವು ಅನ್ವಯವಾಗುವಂತೆಯೇ ಅನ್ವಯವಾಗತಕ್ಕದು.

4. ಭಾರತದ ಸಂಚಿತ ನಿಧಿಗೆ ಸುಂಕದ ಉತ್ಪತ್ತಿಗಳ ಜಮೆ:- 3ನೇ ಪ್ರಕರಣದ ಮೇರೆಗೆ ವಿಧಿಸಲಾದ ಸೀಮಾಸುಂಕಗಳ ಉತ್ಪತ್ತಿಗಳನ್ನು ಮೊದಲು ಭಾರತದ ಸಂಚಿತ ನಿಧಿಗೆ ಜಮೆ ಮಾಡತಕ್ಕದು ಮತ್ತು ಸಂಸತ್ತು ಈ ಬಗ್ಗೆ ಕಾನೂನಿನ ದ್ವಾರಾ ಮಾಡಿದ ಧನ ವಿನಿಯೋಗದ ಮೂಲಕ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಉಪಬಂಧಿಸಿದರೆ, ಕೇಂದ್ರ ಸರ್ಕಾರವು ಸಂಗ್ರಹಣಾ ವೆಚ್ಚಗಳನ್ನು ವಜಾ ಮಾಡಿದ ತರುವಾಯ ಕೃಷಿ ಮತ್ತು ಸಂಸ್ಕರಿಸಿದ ಆಹಾರೋತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ ಉದ್ದೇಶಗಳಿಗಾಗಿ ಉಪಯೋಗಿಸಲು ಯೋಗ್ಯವೆಂದು ಯೋಚಿಸಬಹುದಾದಂಥ ಮೊತ್ತಗಳನ್ನು ಅಂಥ ಉತ್ಪತ್ತಿಗಳಿಂದ ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

* * * *

**ಮುದ್ರಕರು :** ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1. ಕಾ.ಸೂ. p-669